ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ತಮಿಳುನಾಡಿನ ಕರೂರು ಜಿಲ್ಲೆಯ ತರಮಟ್ಟಿ ಗ್ರಾಮ ತಲುಪಿದ ಭಾರತ ಪರಿಕ್ರಮ ಯಾತ್ರೆ. ಶ್ರೀ ಸೀತಾರಾಮ ಕೆದಿಲಾಯರು ಕೈಗೊಂಡಿರುವ ಈ ಯಾತ್ರೆ ಜುಲೈ 9 ರಂದು ಕನ್ಯಾಕುಮಾರಿಯಲ್ಲಿ ಸಮಾರೋಪಗೊಳ್ಳಲಿದೆ.

ಸಂಪುಟ : 38 ಸಂಚಿಕೆ : 17 ಹೇವಿಳಂಬಿ–ಚೈತ್ರ ಕಲಿಯುಗಾಬ್ದ 5118 15–4–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಗೋಹತ್ಯೆ ನಿಷೇಧ ದೇಶದೆಲ್ಲೆಡೆ ಜಾರಿಗೊಳ್ಳಬಹುದೇ?

ಗೋಹತ್ಯೆ ನಿಷೇಧದ ವಿಷಯ ಚರ್ಚೆಗೆ ಬಂದಾಗಲೆಲ್ಲ ಇದು ಅಲ್ಪಸಂಖ್ಯಾತ, ದಲಿತ, ಮುಸಲ್ಮಾನ ಸಮುದಾಯದವರ ಆಹಾರ ಸಂಹಿತೆಯ ವಿರುದ್ಧ, ಮೂಲಭೂತ ಹಕ್ಕಿನ ಹರಣ ಇತ್ಯಾದಿಯಾಗಿ ವಾದ ಮಾಡಲಾಗುತ್ತದೆ. ಗೋಮಾಂಸದ ಕುರಿತಾಗಿ ಭಾರತದ ಯಾವುದೋ ಮೂಲೆಯಲ್ಲಿ ನಡೆದ ಕ್ಷುಲ್ಲಕ ಪ್ರಕರಣಕ್ಕೂ ದೇಶದ ಬುದ್ಧಿಜೀವಿಗಳು ದನಿಯಾಗತೊಡಗುತ್ತಾರೆ. ಉದಾಹರಣೆಗೆ ಉತ್ತರಪ್ರದೇಶದಲ್ಲಿ ಅಖ್ಲಾಕ್ ಪ್ರಕರಣವನ್ನು ಇಲ್ಲಿ ಸ್ಮರಿಸಬಹುದು. ಅಥವಾ ಮಹಾರಾಷ್ಟ್ರದ ಹೈಕೋರ್ಟ್ ಅಲ್ಲಿಯ ಸರಕಾರ ಜಾರಿಗೆ ತಂದ ಗೋಮಾಂಸ ಪೂರ್ಣ ನಿಷೇಧದ ಕಾಯಿದೆಯನ್ನು ಎತ್ತಿಹಿಡಿದಾಗ, ಹರ್ಯಾಣ ಸರಕಾರವೂ ಮಹಾರಾಷ್ಟ್ರದ ಹಾದಿಯನ್ನೇ ತುಳಿಯಲು ಹೊರಟಾಗ ಬುದ್ಧಿಜೀವಿಗಳ ರಾದ್ಧಾಂತ ಅಷ್ಟಿಷ್ಟಲ್ಲ. ಈ ಕೆಲವು ದಿನಗಳ ಹಿಂದೆ ಬಿಜೆಪಿ ಉತ್ತರ ಪ್ರದೇಶ ಸರ್ಕಾರದ ಅಧಿಕಾರ ಚುಕ್ಕಾಣಿ ಹಿಡಿದ ನಂತರ ಅಕ್ರಮವಾಗಿ ನಡೆಸಲಾಗತ್ತಿದ್ದ ಕಸಾಯಿಖಾನೆಗಳನ್ನು ಮುಚ್ಚಲು ಕಠಿಣ ಕ್ರಮಗಳನ್ನು ಕೈಗೊಂಡಾಗಿನಿಂದ ಗೋಮಾಂಸ ವಿಷಯದ ಚರ್ಚೆ ಮತ್ತೆ ಮುಂಚೂಣಿಗೆ ಬಂದಿದೆ.

## ಗೋಮಾಂಸ ರಫ್ತಿನ ಉದ್ಯಮ


ವಿಶ್ವ ಮಾರುಕಟ್ಟೆಯಲ್ಲಿ ಭಾರತದಿಂದ ರಫ್ತಾಗುವ ಗೋಮಾಂಸ ಅಥವಾ ಬೀಫ್‌ನ ಪ್ರಮಾಣ 2016ರ ಅಂಕಿಅಂಶಗಳ ಪ್ರಕಾರ ಬರೋಬ್ಬರಿ 18.5ಲಕ್ಷ ಮೆಟಿಕ್ರ್ ಟನ್‌ಗಳಷ್ಟು. ವಿಶ್ವದ ಒಟ್ಟೂ ರಫ್ತಿನಲ್ಲಿ ಭಾರತದ ಪಾಲು ಶೇ. 19.6. ಬೀಫ್ ರಫ್ತು ಮಾಡುವ ಇತರೆ ಪ್ರಮುಖ ದೇಶಗಳಾದ ಬ್ರೆಜಿಲ್, ಆಸ್ಟ್ರೇಲಿಯಾ, ಅಮೇರಿಕ ದೇಶಗಳನ್ನು ಹಿಂದಿಕ್ಕಿ ಭಾರತ ಮೊದಲ ಸ್ಥಾನದಲ್ಲಿ ನಿಂತಿದೆ. 2015–16ನೇ ಸಾಲಿನಲ್ಲಿ ಎಮ್ಮೆಕೋಣಗಳ ಮಾಂಸದಿಂದ ಗಳಿಸದ ಹಣವೇ 26.6ಸಾವಿರ ಕೋಟಿ ರೂಪಾಯಿಗೂ ಅಧಿಕ. ಮಾಂಸ ಉತ್ಪಾದನೆಗೆ ಪ್ರೋತ್ಸಾಹ ನೀಡುವ ಪಿಂಕ್ ರವೊಲ್ಯೂಶನ್ ಪರಿಣಾಮವಾಗಿ 2013ಕ್ಕಿಂತ ಮುಂಚಿನ ನಾಲ್ಕು ವರ್ಷಗಳಲ್ಲಿ ಗೋಮಾಂಸ ರಫ್ತು ಶೇ 44ರಷ್ಟು ವೃದ್ಧಿಯಾಯಿತು. 2014ರಲ್ಲಿ ಪ್ರತಿಷ್ಠಿತ ಭಾಸ್ಮತಿ ಅಕ್ಕಿಯ ರಫ್ತಿನಿಂದ ಗಳಿಸಿದ ಹಣಕ್ಕಿಂತ ಹೆಚ್ಚು ಹಣವನ್ನು ಎಮ್ಮೆಕೋಣಗಳ ರಫ್ತಿನಿಂದ ದೇಶ ಗಳಿಸಿತು. ದೇಶದ ಹದಿನೆಂಟು ರಾಜ್ಯಗಳಲ್ಲಿ ಸಂಪೂರ್ಣ ಗೋಹತ್ಯೆಯ ನಿಷೇಧ ಇರುವಾಗ ಹಾಗೆಯೇ ಬಹುಸಂಖ್ಯಾತ ನಾಗರಿಕರಲ್ಲಿ ಗೋವಿನ ಬಗ್ಗೆ ಆದರ ಶ್ರದ್ಧೆ ಇರುವ ನಡುವೆಯೇ ಭಾರತ ಗೋಮಾಂಸ ರಫ್ತಿನಲ್ಲಿ ಈ ಸಾಧನೆ ಮಾಡಿರುವುದು!!

ಕೇರಳ, ಪಶ್ಚಿಮಬಂಗಾಳ, ಕೆಲವು ಈಶಾನ್ಯರಾಜ್ಯಗಳನ್ನು ಹೊರತುಪಡಿಸಿದರೆ ಎಲ್ಲಾ ರಾಜ್ಯಗಳಲ್ಲೂ ಗೋಹತ್ಯೆ ನಿಷೇಧಕ್ಕೆ ಕಾಯಿದೆಯಾಗಿದೆ. ಗೋಹತ್ಯೆಯ ಕಾನೂನಿನ ಪ್ರಕಾರ ಗೋವು ಎಂದರೆ ಹಸು, ಕರು ಎಂದೇ ಆಗಿದೆ. ದೇಶದಲ್ಲಿ ಸಕ್ರಮವಾಗಿಯೂ ನಡೆಯುತ್ತಿರುವ ಕಸಾಯಿಖಾನೆಗಳು ಗೂಳಿ, ಹೋರಿ, ಎಮ್ಮೆ, ಕೋಣಗಳ ಹತ್ಯೆ ನಡೆಯುತ್ತಿವೆ. ವಿವಿಧ ರಾಜ್ಯಗಳಲ್ಲಿನ ಕಾನೂನುಗಳು ಗೋಹತ್ಯೆ ಮಾಡುವವರಿಗೆ ಮೂರು ವರ್ಷಗಳ ಕಠಿಣ ಸಜೆಯನ್ನು ವಿಧಿಸುತ್ತದೆ. ಕೆಲ ರಾಜ್ಯಗಳಲ್ಲಿ ಗೋಹತ್ಯೆ ಮಾಡಿದರೆ ತೆರಬೇಕಾದ ದಂಡದ ಮೊತ್ತವೂ ಹೆಚ್ಚೇ ಇದೆ. ಆದರೂ ಸರಿಯಾದ ಕಾನೂನು ಪಾಲನೆ, ಶಿಕ್ಷೆ ಅನುಭವಿಸುತ್ತಿರುವ ತಪ್ಪಿತಸ್ತರ ಸಂಖ್ಯೆ ತೀರಾ ವಿರಳ.

## ಉತ್ತರ ಪ್ರದೇಶದ ಅಕ್ರಮ ಕಸಾಯಿಖಾನೆಗಳಿಗೆ ಬೀಗ

ಉತ್ತರ ಪ್ರದೇಶದಲ್ಲಿ ಬಿಜೆಪಿಯು ಚುನಾವಣಾ ಪ್ರಣಾಳಿಕೆಯಲ್ಲಿ ಗೋಹತ್ಯೆಯ ನಿಷೇಧವನ್ನು ಹಾಗೂ ಅಕ್ರಮ ಕಸಾಯಿಖಾನೆಗಳನ್ನು ಮುಚ್ಚುವ ಭರವಸೆಯನ್ನು ನೀಡಿತ್ತು. ಗೋವಿನಮಾಂಸ ರಫ್ತಿನ ಸಿಂಹಪಾಲು ಉತ್ತರ ಪ್ರದೇಶಕ್ಕೆ ಸೇರುತ್ತದೆ. ಸುಮಾರು ಅರ್ಧದಷ್ಟು ಬೀಫ್ ರಫ್ತಾಗುತ್ತಿದ್ದುದು ಉತ್ತರ ಪ್ರದೇಶದಿಂದಲೇ. ಸರಕಾರದಿಂದ ಮಾನ್ಯತೆ ಪಡೆದ 72 ಕಸಾಯಿಖಾನೆಗಳ ಪೈಕಿ 38 ಉತ್ತರಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಉತ್ತರಪ್ರದೇಶದಲ್ಲಿ 375 ಅಕ್ರಮಕಸಾಯಿಖಾನೆಗಳಿವೆ ಎಂಬುದು ಸರಕಾರಕ್ಕೆ ಸಿಕ್ಕ ಖಚಿತ ಮಾಹಿತಿ. ಬಹುತೇಕ ಮಾನದಂಡ ಹಾಗೂ ನಿಯಮಗಳನ್ನು ಗಾಳಿಗೆ ತೂರಿ ನಡೆಸಲ್ಪಡುತ್ತಿದ್ದ ಈ ಕಸಾಯಿಖಾನೆಗಳ ಕೊಳಕು ತ್ಯಾಜ್ಯ ಚರಂಡಿಗಳಲ್ಲಿ ಹರಿದು ಕೊನೆಗೆ ಸೇರುತ್ತಿದ್ದುದು ಗಂಗಾ, ಯಮುನಾ ನದಿಗಳಿಗೆ. ಈ ಕುರಿತು ವಿಚಾರಣೆ ನಡೆಸಿದ ನ್ಯಾಶನಲ್ ಗ್ರೀನ್ ಟ್ರಿಬ್ಯೂನಲ್ ಕೆಲ ಕಸಾಯಿಖಾನೆಗಳನ್ನು ಮುಚ್ಚಬೇಕೆಂಬ ಆದೇಶವನ್ನೂ 2013, 2015ರಲ್ಲಿ ಹೊರಡಿಸಿತ್ತು. ಇದುವರೆಗಿನ ಉತ್ತರ ಪ್ರದೇಶದ ಸರ್ಕಾರಗಳು ಈ ವಿಷಯದಲ್ಲಿ ಮಾತ್ರ ತಲೆ ಕೆಡಿಸಿಕೊಳ್ಳಲೇ ಇಲ್ಲ.

ಕಾನೂನನ್ನು ಮೀರಿ ನಡೆಯುತ್ತಿದ್ದ ಅಕ್ರಮ ಕಸಾಯಿಖಾನೆಗಳ ಜೊತೆಗೆ ದನಕರುಗಳ ಕಳ್ಳತನ, ಅಕ್ರಮ ಸಾಗಣೆ ನಿರಂತರ ನಡೆದಿತ್ತು. ಈ ಅಕ್ರಮಗಳಿಂದ ಗೋವಿನ ಸಂತತಿ ಇಳಿಮುಖನಾಗುತ್ತಿದ್ದುದನ್ನು ಯಾರೂ ತಳ್ಳಿಹಾಕುವಂತಿರಲಿಲ್ಲ. ಅತಿಯಾಗಿ ದನಗಳನ್ನು ಕೊಲ್ಲುತ್ತಿದ್ದುದರಿಂದ ಹಾಲಿನ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಆತಂಕವೂ ಕಂಡಿತು. ಆದ್ದರಿಂದ ಕಸಾಯಿಖಾನೆಗಳ ಮೇಲೆ ನಿಯಂತ್ರಣ ತಂದು ಅನಧಿಕೃತ ಹಾಗೂ ನಿಯಮಗಳನ್ನು ಪಾಲಿಸದ ಕಸಾಯಿಖಾನೆಗಳನ್ನು ಮುಚ್ಚಲು ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗಿತ್ತು. ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಮಾಡಿದ್ದು ಇದನ್ನೇ. ಸರ್ಕಾರದ ಆದೇಶದಂತೆ 20ಕ್ಕೂ ಹೆಚ್ಚು ಕಸಾಯಿಖಾನೆಗಳಿಗೆ ಬೀಗ ಜಡಿಯಾಯಿತು.




ಉತ್ತರ ಪ್ರದೇಶದ ಕಸಾಯಿಖಾನೆಗಳ ಉದ್ಯಮ 15ಸಾವಿರ ಕೋಟಿ ರೂಪಾಯಿಗಳ ಬೃಹತ್ ಕೈಗಾರಿಕೆ, ಲಕ್ಷಾಂತರ ಜನರು ಇದರಲ್ಲಿ ಉದ್ಯೋಗ ಮಾಡುತ್ತಾರೆ. ಕಸಾಯಿಖಾನೆಗಳ ಮೇಲೆ ನಿರ್ಭಂಧ ಹೇರುವುದರಿಂದ ಇವರು ಉದ್ಯೋಗ ಕಳೆದುಕೊಳ್ಳುತ್ತಾರೆ, ಇತ್ಯಾದಿಯಾಗಿ ವಾದಗಳನ್ನು ತಥಾಕಥಿತ ಜಾತ್ಯಾತೀತವಾದಿಗಳು ವಿರೋಧ ಪಕ್ಷಗಳು ಮಂಡಿಸುತ್ತಿವೆ. ಆದರೆ ಇದು ಇಷ್ಟು ವರ್ಷಗಳ ಸರ್ಕಾರಿ ನಿರ್ಲಕ್ಷದ ಪರಿಣಾಮ, ಜೊತೆಗೆ ಅಕ್ರಮವಾಗಿ ನಡೆಯುತ್ತಿರುವ ಈ ಉದ್ಯಮದಿಂದ ರಾಜ್ಯದ ಜಾನುವಾರು ಸಂತತಿ ಕ್ಷೀಣಿಸುತ್ತಿರುವುದು ಹಾಗೂ ಇವು ಉಂಟು ಮಾಡುತ್ತಿರುವ ಪರಿಸರ ಮಾಲಿನ್ಯದ ಕುರಿತು ಸೆಕ್ಯುಲರ್‌ವಾದಿಗಳು ಮತ್ತು ಮಾಧ್ಯಮಗಳು ಕುರುಡಾಗಿವೆ.

### ಗೋಹತ್ಯೆಯ ನಿಷೇಧದ ಪರ ಮುಸಲ್ಮಾನರು

"ಇಡೀ ದೇಶದಲ್ಲಿ ಗೋಹತ್ಯೆಯನ್ನು ನಿಷೇಧಿಸಬೇಕು. ಎಲ್ಲ ಕಸಾಯಿಖಾನೆಗಳನ್ನು ಮುಚ್ಚಬೇಕು. ಯಾವ ಪ್ರಾಣಿಗಳನ್ನೂ ವಧೆ ಮಾಡಬಾರದು. ಮಾಂಸಾಹಾರ ಸೇವನೆ ಮುಸಲ್ಮಾನರಿಗೆ ಕಡ್ಡಾಯವೇನು ಅಲ್ಲ. ಆದ್ದರಿಂದ ಮಾಂಸಾಹಾರವನ್ನು ತ್ಯಜಿಸಬೇಕು ಎಂದು ನಾನು ವಿನಂತಿ ಮಾಡುತ್ತೇನೆ" ಇದನ್ನು ಹೇಳಿದ್ದು ಮುಸ್ಲಿಂ ಕಟ್ಟರ್ ನಾಯಕ ಎಂದೇ ಗುರುತಿಸಲ್ಪಡುವ ಉ.ಪ್ರ. ಸರ್ಕಾರದ ಮಾಜಿ ಮಂತ್ರಿ ಆಜಂ ಖಾನ್.

ರಾಜಸ್ಥಾನ ಪ್ರಸಿದ್ಧ ಅಜ್ಮೇರ್ ದರ್ಗಾದ ಧಾರ್ಮಿಮ ಮುಖಂಡ ದಿವಾನ್ ಸೈಯದ್ ಜೈನುಲ್ ಅಬ್ದಿನ್ ದೇಶದಲ್ಲಿ ಗೋಹತ್ಯೆಯನ್ನು ನಿಷೇಧಿಸಬೇಕು ಎಂದು ಹೇಳಿದ್ದಾರೆ. "ನಾನು ಹಾಗೂ ನನ್ನ ಕುಟುಂಬದವರು ಗೋಮಾಂಸ ಸೇವನೆಯನ್ನು ತ್ಯಜಿಸುತ್ತೇವೆ. ದೇಶದಲ್ಲಿ ಮತೀಯ ಸೌಹಾರ್ದ ಸ್ಥಾಪಿಸುವ ನಿಟ್ಟಿನಲ್ಲಿ ಮುಸಲ್ಮಾನರು ಗೋಮಾಂಸ ಸೇವನೆಯನ್ನು ಬಿಡಬೇಕು. ಸರ್ಕಾರವು ಎಲ್ಲ ತರದ ದನಗಳ ಹತ್ಯೆ ಮತ್ತು ಮಾಂಸ ಮಾರಾಟವನ್ನು ನಿಷೇಧಿಸಬೇಕು" ಎಂದು ಹೇಳಿದ ಅವರು ಗೋವನ್ನು ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಾಮಾನ್ಯವಾಗಿ ಗೋಹತ್ಯೆಯ ವಿಚಾರವನ್ನಿಟ್ಟುಕೊಂಡು ಇದು ಮುಸ್ಲಿಂ ವಿರೋಧಿ ಎಂದೇ ಬಿಂಬಿಸಲಾಗುವ ವಾತಾವರಣದ ನಡುವೆ ಮುಸ್ಲಿಂ ಸಮಾಜದ ಅನೇಕರು ಗೋಹತ್ಯೆಯ ವಿರುದ್ಧವಾಗಿ ದನಿ ಎತ್ತುತ್ತಿರುವು ಒಂದು ಸ್ವಾಗತಾರ್ಹ ಬದಲಾವಣೆಯಾಗಿದೆ.

## ದೇಶದಲ್ಲಿ ಗೋಹತ್ಯೆ ನಿಷೇಧ ಕಾನೂನುಗಳು

ಗೋಹತ್ಯೆಯ ವಿರುದ್ಧ ಕ್ರಮ ಕೈಗೊಂಡವರಲ್ಲಿ ಉ.ಪ್ರ. ಸರ್ಕಾರವೇ ಮೊದಲಲ್ಲ. ಉತ್ತರ ಪ್ರದೇಶದಲ್ಲೇ 1954 ರಿಂದ1960 ರವರೆಗೆ ಮುಖ್ಯಮಂತ್ರಿಯಾಗಿದ್ದ, ಕಾಂಗ್ರೆಸ್ಸ ಪಕ್ಷವನ್ನು ಪ್ರತಿನಿಧಿಸುತ್ತಿದ್ದ ಡಾ. ಸರ್ವಶ್ರೀ ಸಂಪೂರ್ಣಾನಂದರು ಅಂದಿನ ಪ್ರಧಾನಿ ನೆಹರೂರ ಇಚ್ಛೆಯ ವಿರುದ್ಧ ನಿಂತು ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದ್ದರು. ಅಂದಿನ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ಇಡಿಯ ದೇಶದಲ್ಲಿ ಇಂತಹ ಕಾನೂನನ್ನು ತರಬೇಕೆಂದು ನೆಹರೂರವರ ಮನ ಒಲಿಸುವ ಪ್ರಯತ್ನ ಮಾಡಿದ್ದರಾದರೂ ನೆಹರೂ ಇದಕ್ಕೆ ಪ್ರತಿರೋಧ ಒಡ್ಡಿದ್ದರು.

ಗುಜರಾತ್ ಸರ್ಕಾರ ಗೋಹತ್ಯೆ, ಗೋಮಾಂಸ ಸಾಗಣೆ ಹಾಗೂ ಗೋಮಾಂಸ ಉತ್ಪನ್ನಗಳ ಮಾರಾಟಕ್ಕೆ ಕಡಿವಾಣ ಹಾಕಿದೆ. ಇದುವರೆಗೆ ಗುಜರಾತಿನಲ್ಲಿ ಗೋಹತ್ಯೆ ಮಾಡುವವರಿಗೆ ಏಳರಿಂದ ಹತ್ತುವರ್ಷದ ಜೈಲು ಶಿಕ್ಷೆ ವಿಧಿಸಲಾಗುತ್ತಿತ್ತು. ಅದನ್ನು ಹೊಸ ಮಸೂದೆಯ ಅನ್ವಯ ಜೀವಾವಧಿ ಶಿಕ್ಷೆಗೆ ಏರಿಸಲಾಗಿದೆ. ಜಾರ್ಖಂಡ್, ಛತ್ತೀಸ್‌ಗಢ್ ರಾಜ್ಯಗಳಲ್ಲೂ ಈ ಬಗ್ಗೆ ಕಠಿಣ ಕಾನೂನನ್ನು ಜರುಗಿಸಲು ಬದ್ಧ ಎಂದು ಅಲ್ಲಿನ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಂತೆಯೇ ಬಿಹಾರದಲ್ಲಿಯೂ ಅಕ್ರಮ ಕಸಾಯಿಖಾನೆಗಳನ್ನು ಮುಚ್ಚುತ್ತೇವೆ ಹಾಗೂ ಕಠಿಣ ಕ್ರಮ ತೆಗೆದುಕೊಳ್ಳಲಿದ್ದೇವೆ ಎಂದು ಅಲ್ಲಿನ ಪಶುಸಂಗೋಪನಾ ಸಚಿವ ಅವಧೇಶ್ ಕುಮಾರ ಸಿಂಗ್ ಹೇಳಿದ್ದಾರೆ. ಕೇರಳ, ತಮಿಳುನಾಡು,

*(2ನೇ ಪುಟಕ್ಕೆ...)*

(1ನೇ ಪುಟದಿಂದ...)

ಪಶ್ಚಿಮ ಬಂಗಾಲ, ಆಸ್ಸಾಂ ಮತ್ತಿತರ ಈಶಾನ್ಯ ಭಾರತ ರಾಜ್ಯಗಳನ್ನು ಹೊರತು ಪಡಿಸಿ ದೇಶದ ಬಹುತೇಕ ರಾಜ್ಯಗಳಲ್ಲಿ ಗೋಹತ್ಯಾ ನಿಷೇಧ ಕಾನೂನಿದೆ. ಆದರೆ ಈ ಕಾನೂನುಗಳು ಸಮರೂಪಿಯಾಗಿಲ್ಲ. ಉದಾಹರಣೆಗೆ ಆಸ್ಸಾಂ ಮತ್ತು ಪ. ಬಂಗಾಲಗಳಲ್ಲಿ 10–14 ವರ್ಷದ ಆಕಳುಗಳನ್ನು ಕೊಲ್ಲಬಹುದಾಗಿದೆ. ಕೆಲವು ರಾಜ್ಯಗಳಲ್ಲಿ ಪ್ರಮಾಣ ಪತ್ರ ಪಡೆದು ದನಗಳನ್ನು ಸಾಯಿಸಬಹುದಾಗಿದೆ. ಆದರೆ ಯಾವ ರಾಜ್ಯದ ಕಾನೂನು ಕೂಡ ಗೋಮಾಂಸ ಭಕ್ಷಣೆಯನ್ನು ನಿಷೇಧಿಸಿಲ್ಲ.

ಭಾರತೀಯ ಸಂಸ್ಕೃತಿಯಲ್ಲಿ ಗೋವನ್ನು ಪೂಜಿಸುವ ಸಂಗತಿ ಹೊಸತೇನಲ್ಲ. ಗಾವೋ ವಿಶ್ವಸ್ಯ ಮಾತರಃ ಎಂದೇ ಗೋವಂಶಕ್ಕೆ ಪೂಜ್ಯ ಸ್ಥಾನ ನೀಡಿದ ಪರಂಪರೆ ನಮ್ಮದು, ಇದಕ್ಕೆ ಕಾರಣ ಕೇವಲ ಧಾರ್ಮಿಕ ನಂಬಿಕೆಯಲ್ಲ. ಗೋವಂಶದಿಂದ ಅಪಾರ ಉಪಕೃತವಾದ ಭಾರತೀಯ ಸಮಾಜ ತೋರಿಸಿರುವ ಉಪಕಾರ ಸ್ಮರಣೆ ಅದು. ಈ ಶ್ರದ್ಧೆ ಜಾತಿಮತಗಳ ಗಡಿಯನ್ನು ಮೀರಿದ್ದು. ಗೋವಂಶ ದೇಶದ ಸಂಸ್ಕೃತಿಯ ಜೊತೆಗೆ ಅವಿಭಾಜ್ಯ ಅಂಗವಾಗಿದೆ, ಅಷ್ಟೇ ಅಲ್ಲ ದೇಶದ ಆರ್ಥಿಕತೆ, ಹಾಲಿನ ಮತ್ತು ಹಾಲಿನ ಉತ್ಪನ್ನಗಳಿಂದ ಸಿಗುವ ಜೀವಪೋಷಕ ಆಹಾರ ಗೋವಂಶದ ಉಳಿವಿನ ಮೇಲೆ ನಿರ್ಭರವಾಗಿದೆ. ಒಂದು ಗೋವಿನಿಂದ ಅದರ ಜೀವಿತಾವಧಿಯಲ್ಲಿ ಸಿಗುವ ಲಾಭ ಅದನ್ನು ಕೊಂದು ಗಳಿಸುವ ಮಾಂಸದಿಂದ ಗಳಿಸುವ ಹಣಕ್ಕಿಂತ ಎಷ್ಟೋ ಪಟ್ಟು ಹೆಚ್ಚು. ಆದ್ದರಿಂದ ಗೋಹತ್ಯೆ ನಿಷೇಧ ಕೇವಲ ಭಾವನಾತ್ಮಕ ವಿಷಯವಲ್ಲ.



**ಹೆಸರು :** ಅಮೃತಮಹಲ್

**ಮೂಲ :** ಕರ್ನಾಟಕದ ಬಯಲುಸೀಮೆ ಪ್ರದೇಶ

**ರೂಪ :** ಕಪ್ಪು, ಬಿಳಿ, ಬೂದು ಬಣ್ಣವನ್ನು ಹೊಂದಿವೆ. ಉದ್ದ ಕೋಡುಗಳನ್ನು ಹೊಂದಿವೆ. ಹಿಂದೆ ಯುದ್ಧ ಕಾಲದಲ್ಲಿ ಸಾಧನೆ ಸಲಕರಣೆಗಳನ್ನು ಸಾಗಿಸುವುದಕ್ಕೆ ಬಳಸಲಾಗುತ್ತಿತ್ತು.

**ವಿಶೇಷತೆ :** ವಿಜಯನಗರದ ಅರಸರು, ಮೈಸೂರು ಅರಸರು ವಿಶೇಷ ಮುತುವರ್ಜಿ ವಹಿಸಿ ಸಂರಕ್ಷಿಸಿದ ತಳಿ.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ ಸರಾಸರಿ 500 ಕೆಜಿ

# ಪಾಳು ನೆಲದಲ್ಲಿ ಬಂಗಾರದ ಬೆಳೆ

ನೆಲದ ಮಾತು

ನಿರಂತರ ಮಳೆ ಕೊರತೆ ನಡುವೆಯೂ ಹಸಿರು ಕ್ರಾಂತಿ ಮೊಳಗಿಸುವುದು ಅಷ್ಟು ಸುಲಭದ ವಿಷಯವಲ್ಲ. ಆಸಕ್ತಿ, ಕಲಿಕೆ, ದೃಢಸಂಕಲ್ಪ, ದೂರಾಲೋಚನೆ, ಪರಿಶ್ರಮ ಎಲ್ಲಾ ಅಂಶಗಳು ಇಂದು ಶಿಕಾರಿಪುರ ತಾಲ್ಲೂಕಿನ ಕಡೇನಂದಿಹಳ್ಳಿಯ ಹೂವಪ್ಪ ಅವರನ್ನು ಸಾಧನೆಯ ಹಾದಿಯಲ್ಲಿ ನಿಲ್ಲುವಂತೆ ಮಾಡಿದೆ.

ಖಾಸಗಿ ಕಂಪೆನಿಯೊಂದರಲ್ಲಿ ಕಾರ್ಮಿಕನಾಗಿ ಕರ್ನಾಟಕ ಮಾತ್ರವಲ್ಲದೆ ಮುಂಬೈ, ಗುಜರಾತ್, ಮಧ್ಯಪ್ರದೇಶದಲ್ಲಿ ಸೇವೆ ಸಲ್ಲಿಸಿದರು. ಆದರೆ ಅನಾರೋಗ್ಯದ ಕಾರಣ ಹುಟ್ಟಿದ ಊರಿಗೆ ಅನಿವಾರ್ಯವಾಗಿ ವಾಪಸಾದ ಹೂವಪ್ಪ ಅವರು ನೆಚ್ಚಿಕೊಂಡಿದ್ದು ಭೂತಾಯಿಯನ್ನು.

ಪಿತ್ರಾರ್ಜಿತ ಆಸ್ತಿಯಾಗಿ 3.9ಎಕರೆ ಜಮೀನು ಹೂವಪ್ಪರ ಪಾಲಿಗೆ ಬಂದ ಭೂಮಿ ನೀರು, ಗೊಬ್ಬರ ಕಾಣದೆ ಬಂಜರಾಗಿತ್ತು. ಆದ್ದರಿಂದ ಕೊಳವೆ ಬಾವಿ ಕೊರೆಸಿದರು. ಅದೃಷ್ಟಕ್ಕೆ ಮೂರು ಇಂಚು ನೀರಿನ ಇಳುವರಿ ಸಿಕ್ಕಿತು. ಭೂಮಿಯನ್ನು ಉಳುಮೆಗೆ ಸಿದ್ಧಗೊಳಿಸಿದರು. ಸೆಗಣಿ, ಹಸಿರೆಲೆ ಗೊಬ್ಬರದ ಶಕ್ತಿ ತುಂಬಿದರು. ಆರಂಭದಲ್ಲಿ ಟೊಮೆಟೊ, ಶೇಂಗಾ, ಮೆಣಸಿನ ಗಿಡ, ಮಾವು ಬೆಳೆದರು ಇದು ತೃಪ್ತಿ ತರಲಿಲ್ಲ. ಬೇರೆ ಏನಾದರೂ ಮಾಡಿ ನಾಲ್ಕು ಜನರಿಗೆ ಮಾದರಿಯಾಗಬೇಕು ಎನ್ನುವ ತುಡಿತ ಇತ್ತು.

ಶಿಕಾರಿಪುರ ತಾಲ್ಲೂಕಿನಲ್ಲಿ ಸಾಂಪ್ರದಾಯಿಕ ಪದ್ಧತಿಯಂತೆ ಕಬ್ಬನ್ನು ನೇರವಾಗಿ ಬಿತ್ತುವುದು ರೂಢಿ. ಆದರೆ ಇದರಿಂದ ಇಳುವರಿ ಕಡಿಮೆ ಎಂಬ ಕಾರಣದಿಂದ ಹೂವಪ್ಪನವರು ಸಸಿಗಳನ್ನು ಬೇರೆಡೆಯಿಂದ ತಂದು ಕಬ್ಬು ಬೆಳೆದರು. ಇದರಿಂದ ಇಳುವರಿ ಚೆನ್ನಾಗಿಯೇ ಬಂದಿತಾದರೂ ಖರ್ಚು ಹೆಚ್ಚಾಯಿತು. ಇದನ್ನರಿತು ಖುದ್ದಾಗಿ ಸಸಿಗಳನ್ನು ಬೆಳೆಸಲು ಆರಂಭಿಸಿದರು. 7–8 ತಿಂಗಳು ಪ್ರಾಯದ ಆರೋಗ್ಯಕರ ಕಣ್ಣು ಇರುವ ಕಬ್ಬಿನ ತುಂಡುಗಳನ್ನು ಕತ್ತರಿಸಿ ತಂದು ನಾರು ಗೊಬ್ಬರದೊಂದಿಗೆ ಟ್ರೇನಲ್ಲಿ ಹಾಕಿ ಬೆಳೆಸಿದರು. ಒಂದು ವಾರದ ನಂತರ ಉತ್ತಮ ಗುಣಮಟ್ಟದ ಸಸಿಗಳನ್ನು ಒಂದು ಅಡಿ ಅಂತರದಲ್ಲಿ ನಾಟಿ ಮಾಡಿ ಯಶಸ್ವಿ ಬೆಳೆ ತೆಗೆದರು. ಪರಿಣಾಮ ಈಗ ಆರು ಎಕರೆಯಲ್ಲಿ ಎಕರೆಗೆ 50 ಟನ್‌ನಂತೆ ಇಳುವರಿ ಪಡೆಯುತ್ತಿದ್ದಾರೆ. ಜತೆಗೆ ತೋಟಗಾರಿಕೆ ಇಲಾಖೆ ಸಹಾಯಧನ ಪಡೆದು ಪಾಲಿಥಿನ್ ಹಸಿರು ನೆರಳಿನ ಪರದೆಯಲ್ಲಿ ಕಬ್ಬಿನ ಸಸಿ ಬೆಳೆಸಿದ್ದಾರೆ. ಇವರ ಕಬ್ಬಿಗೆ ಸುತ್ತಮುತ್ತಲ ರೈತರಿಂದ ಭಾರಿ ಬೇಡಿಕೆ ಶುರುವಾಗಿದೆ.



ಬಾಗಲಕೋಟೆ ತೋಟಗಾರಿಕೆ ಇಲಾಖೆ ಅಭಿವೃದ್ಧಿಪಡಿಸಿದ ನುಗ್ಗೆ ತಳಿಯನ್ನು ಮುಕ್ಕಾಲು ಎಕರೆ ಜಮೀನಿನಲ್ಲಿ ಬೆಳೆಸಿದ್ದಾರೆ. ಅದು ಕೇವಲ ಆರು ತಿಂಗಳಲ್ಲೇ ಸೊಗಸಾದ ಫಲ ನೀಡಿದೆ. ಒಂದು ನುಗ್ಗೆ ಗಿಡ ಆರು ತಿಂಗಳಿಗೆ 300ರವರೆಗೂ ಕಾಯಿಗಳನ್ನು ಕೊಡುತ್ತದೆ. ಒಂದು ಕೆ.ಜಿ ನುಗ್ಗೆಗೆ ಮಾರುಕಟ್ಟೆಯಲ್ಲಿ ಕನಿಷ್ಠ 20ರೂ ದರವಿರುತ್ತದೆ ಎನ್ನುವ ಹೂವಪ್ಪ, ಮುಕ್ಕಾಲು ಎಕರೆಯಲ್ಲಿ ನುಗ್ಗೆ ಬೆಳೆಯಲು ಖರ್ಚು ಮಾಡಿರುವುದು ರೂ. 20 ಸಾವಿರ ಮಾತ್ರ. ಇದೀಗ ಬೇರೆ ರೈತರಿಂದಲೂ ಬೇಡಿಕೆ ಬಂದಿರುವುದರಿಂದ ನುಗ್ಗೆ ಸಸಿಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ತಾವೇ ತಯಾರಿಸಿರುವ ಎರೆಹುಳು ಗೊಬ್ಬರ ಹಾಗೂ ಕೊಟ್ಟಿಗೆ ಗೊಬ್ಬರ ಬಳಸುತ್ತಾರೆ.

ಕೇವಲ 12 ಗುಂಟೆ ಜಾಗದಲ್ಲಿ ಹಸಿರು ನೆರಳು ಪರದೆ ಮನೆ ನಿರ್ಮಿಸಿಕೊಂಡು ಯಥೇಚ್ಛವಾಗಿ ಬೀನ್ಸ್ ಬೆಳೆ ತೆಗೆದಿದ್ದಾರೆ. ತೇವಾಂಶ ಹೆಚ್ಚಾಗದಂತೆ 3/2 ಅಳತೆಯಲ್ಲಿ ಬೆಡ್ ನಿರ್ಮಿಸಿಕೊಂಡು ಬೀನ್ಸ್ ಬೆಳೆದಿರುವ ಇವರು ಕೇವಲ ಮೂರು ತಿಂಗಳಿನಲ್ಲೇ ಮೊದಲ ಬೆಳೆಯಲ್ಲಿ ನಾಲ್ಕು ಕ್ವಿಂಟಲ್ ಬೀನ್ಸ್ ಇಳುವರಿ ಪಡೆದಿದ್ದಾರೆ.

ಒಂದೂವರೆ ಎಕರೆಯಲ್ಲಿ ಅಡಿಕೆ, ಆರು ಎಕರೆಯಲ್ಲಿ ಗೋವಿನ ಜೋಳ ಹಾಗೂ ಜಮೀನಿನ ಸುತ್ತ 150ಕ್ಕೂ ಹೆಚ್ಚು ಸಾಗುವಾನಿ ಗಿಡಗಳನ್ನು ಬೆಳೆಸುತ್ತಿದ್ದಾರೆ. ಇದು ದೀರ್ಘಕಾಲಿಕ ಬೆಳೆಯಾಗಿದ್ದು, ಭವಿಷ್ಯಕ್ಕೆ ಬುನಾದಿ ಎಂಬ ನಂಬಿಕೆ ಇವರದ್ದು.

ಹೂವಪ್ಪನವರು ಮೊದಲು ತೆಗೆಸಿದ್ದ ಕೊಳವೆ ಬಾವಿ ಕೆಲವೇ ದಿನಗಳಲ್ಲಿ ಬತ್ತಿ ಹೋಯಿತು. ಮತ್ತೊಂದರಿಂದ ಆರು ಇಂಚು ನೀರು ದೊರಕಿತು. ನೀರಿನ ಮೌಲ್ಯದ ಅರಿವಾದದ್ದು ಆಗಲೇ. ನೀರು ಇಂಗಿದರೆ ಮಾತ್ರ ಅಂತರ್ಜಲ ವೃದ್ಧಿಯಾಗುತ್ತದೆ. ಕೊಳವೆಬಾವಿಯಲ್ಲೂ ಸದಾ ನೀರು ಚಿಮ್ಮುತ್ತದೆ ಎಂಬ ಸತ್ಯಾನ್ವೇಷಣೆಯಿಂದ ಜಮೀನಿನ ಇಳಿಜಾರಿನ ಪ್ರದೇಶದಲ್ಲಿ ಕೃಷಿ ಹೊಂಡ ನಿರ್ಮಿಸಿದರು. ಇದರಿಂದ ಭೂಮಿಯಲ್ಲಿ ಅಂತರ್ಜಲ ಹೆಚ್ಚಾಯಿತು.

(ಕೃಪೆ: ಪ್ರಜಾವಾಣಿ)

## ಡಾ. ಬಿ.ಆರ್.ಅಂಬೇಡ್ಕರ್

(ಏಪ್ರಿಲ್ 14, 1891 – ಡಿಸೆಂಬರ್ 6, 1956)



ಭೀಮರಾವ್ ರಾಮ್ಜೀ ಅಂಬೇಡ್ಕರ್, ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದವರು. ಅವರ ಅಧ್ಯಯನಶೀಲತೆ ಅಪಾರವಾದುದು. ತಮ್ಮ ವಿದ್ವತ್, ಪಾಂಡಿತ್ಯದಿಂದ ಭಾರತದ ಸಂವಿಧಾನವನ್ನು ರಚಿಸಿದ ಇವರನ್ನು 'ಸಂವಿಧಾನ ಶಿಲ್ಪಿ' ಎಂದು ಕರೆಯುತ್ತಾರೆ.

1908ರಲ್ಲಿ ಅಂಬೇಡ್ಕರ್ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ, ಆಗಿನ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯ ಎಂದು ಕರೆಯಲ್ಪಡುತ್ತಿದ್ದ ತಮ್ಮ ಸಮಾಜಕ್ಕೆ ಮೊದಲನೆಯವರಾದರು. 1927ರಿಂದ 1932ರವರೆಗೆ, ಅಹಿಂಸಾತ್ಮಕ ಆಂದೋಲನಗಳ ಮುಂದಾಳತ್ವ ವಹಿಸಿ ಅಸ್ಪೃಶ್ಯರಿಗೆ ದೇವಾಲಯ ಪ್ರವೇಶದ ಹಕ್ಕು, ಸಾರ್ವಜನಿಕ ಕೆರೆ, ಬಾವಿಗಳಿಂದ ನೀರು ಸೇದುವ ಹಕ್ಕು ಇತ್ಯಾದಿಗಳಿಗಾಗಿ ಹೋರಾಡಿದರು. ಇವುಗಳಲ್ಲಿ ನಾಸಿಕದಲ್ಲಿಯ ಕಾಳ ರಾಮನ ದೇವಸ್ಥಾನ ಮತ್ತು ಮಹಾಡದ ಚೌಡಾರ್ ಕೆರೆಯ ವಿಷಯವಾಗಿ ಅಸ್ಪೃಶ್ಯರನ್ನು ಹೊರಗಿಟ್ಟಿರುವರ ವಿರುದ್ಧ ಮಾಡಿದ ಆಂದೋಲನಗಳು ಗಮನಾರ್ಹವಾಗಿವೆ.1939ರಲ್ಲಿ ಎರಡನೆಯ ಮಹಾಯುದ್ಧ ಆರಂಭವಾದಾಗ, ಬ್ರಿಟಿಷ್ ಸರಕಾರವನ್ನು ಈ ಯುದ್ಧದಲ್ಲಿ ಬೆಂಬಲಿಸಬೇಕೆಂದು ಸಾರ್ವಜನಿಕರಿಗೆ ಕರೆ ಕೊಟ್ಟ ಅವರು, ಅಸ್ಪೃಶ್ಯರೆಂದು ದೂರವಿಟ್ಟಿದ್ದ ಸಮಾಜದ ಜನರು ಭಾರತೀಯ ಸೇನೆಯಲ್ಲಿ ಭರ್ತಿಯಾಗುವಂತೆ ಪ್ರೋತ್ಸಾಹಿಸಿದರು. 1941ರಲ್ಲಿ ಅಂಬೇಡ್ಕರರನ್ನು ರಕ್ಷಣಾ ಸಲಹಾ ಸಮಿತಿಗೆ (ಡಿಫೆನ್ಸ್ ಅಡ್ವೈಸರೀ ಕಮಿಟಿ) ನೇಮಕ ಮಾಡಲಾಯಿತು.

### ಅಂಬೇಡ್ಕರ್ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ

ಅಂಬೇಡ್ಕರ ಅವರ ಪ್ರಜಾಪ್ರಭುತ್ವದ ಕಲ್ಪನೆ ತೀರ ವಿಭಿನ್ನ. ಸಮಾಜವನ್ನು ಆದರ್ಶ ಸಮಾಜವನ್ನಾಗಿ ತಮ್ಮ ಕಲ್ಪನೆಯ ಸುಖಿರಾಜ್ಯ ವನ್ನಾಗಿ ಬದಲಾಯಿಸಿ, ಸ್ವಾತಂತ್ರ್ಯ, ಸಮಾನತೆ ಮತ್ತು ಭಾತೃತ್ವ ಗಳನ್ನು ಒಟ್ಟಿಗೆ ಸಾಧಿಸಬಲ್ಲದೆಂಬಂತೆ ಪ್ರಜಾಪ್ರಭುತ್ವವನ್ನು ಅವರು ಕಲ್ಪಿಸಿಕೊಂಡ್ಡಿದರು.

ಪ್ರಜಾಪ್ರಭುತ್ವವೆಂದರೆ ಸರ್ಕಾರದ ಒಂದು ರೂಪವೆಂದು ಅದು ಹುಟ್ಟಿದ ಪ್ರಾಚೀನತೆಯಿಂದ ಇಂದಿನ ಆಧುನಿಕತೆಯವರೆಗೂ ಕಲ್ಪಿಸಿಕೊಳ್ಳಲಾಗಿದೆ. ಆದರೆ ಪ್ರಜಾಪ್ರಭುತ್ವವು ಕೇವಲ ಸರ್ಕಾರದ ಒಂದು ರೂಪವಲ್ಲ. ಅದು ಪ್ರಮುಖವಾಗಿ ಸಹಬಾಳ್ವೆಯ ಸೊಗಸು ಮತ್ತು ಅನುಭವವನ್ನು ಪರಸ್ಪರ ಹಂಚಿಕೊಳ್ಳುವ ಒಂದು ಜೋಡಣೆ. ಮೂಲಭೂತವಾಗಿ ಅದು ಸಹವರ್ತಿಗಳೆಡೆಗೆ ತೋರುವ ಗೌರವಾದರ ಭಾವನೆ ಎಂದು ಅವರು ಹೇಳಿದ್ದಾರೆ.

ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಪ್ರಜಾಸತ್ತಾತ್ಮಕ ಸಮಾಜವನ್ನು ನಿರೀಕ್ಷಿಸುತ್ತದೆ. ಆದರೆ ರಾಜಕಾರಣಿಗಳು ಪ್ರಜಾಪ್ರಭುತ್ವವು ಮೂಲಭೂತವಾಗಿ ಸಮಾಜದ ಒಂದು ಸ್ವರೂಪ, ಹೊರತಾಗಿ ಕೇವಲ ಸರ್ಕಾರದ ಮಾದರಿ ಅಲ್ಲ ಅನ್ನುವುದನ್ನು ಗ್ರಹಿಸಲ್ಲಿಲ್ಲ. ಅಂಬೇಡ್ಕರ್ ಆಶಿಸದ ಪ್ರಜಾಪ್ರಭುತ್ವವು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಮೊದಲನೆಯದು ಸಹವರ್ತಿಗಳಿಗೆ ಗೌರವ ಮತ್ತು ಸಮಾನತೆ ನೀಡುವ ಮನೋಭಾವ. ಎರಡನೆಯದು ಸಾಮಾಜಿಕ ಅಡೆ–ತಡೆಗಳಿಂದ ಮುಕ್ತವಾದ ಸರ್ವರಿಗೂ ಸಮಾನ ನ್ಯಾಯ ಒದಗಿಸಬಲ್ಲ ಸಮಾಜ.

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನಭಾಗ್, ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ದನದ ಸಗಣಿಯಿಂದ ಉತ್ಪಾದಿಸಿದ ಜೈವಿಕ ಅನಿಲದಿಂದ ಚಲಿಸುವ, ದೇಶದಲ್ಲೇ ಅತ್ಯಂತ ಅಗ್ಗದ ಬಸ್ ಸೇವೆ ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಲ್ಲಿ ಆರಂಭಗೊಂಡಿದೆ. ಪ್ರಥಮ ಬಸ್ಸಿಗೆ ಈಗಾಗಲೆ ಹಸಿರು ನಿಷಾನೆ ದೊರಕಿದ್ದು ಇದು ಕೋಲ್ಕತ್ತಾದ ಉತ್ತರದಲ್ಲಿರುವ ಉಲ್ತಡಂಗ ಹಾಗೂ ದಕ್ಷಿಣದಲ್ಲಿರುವ ಗರಿಯ ನಡುವೆ ಸಂಚರಿಸಲಿದೆ. ಕೇವಲ ಒಂದು ರೂಪಾಯಿಗೆ ಈ ಬಸ್ಸಿನಲ್ಲಿ 17.5 ಕಿಲೋ ಮೀಟರ್ ಪ್ರಯಾಣಿಸಬಹುದಾಗಿದ್ದು, ಭಾರತದ ಅತ್ಯಂತ ಅಗ್ಗದ ಬಸ್ ಸೇವೆ ಇದಾಗಿದೆ. ಫೀನಿಕ್ಸ್ ಇಂಡಿಯಾ ಸಂಶೋಧನೆ ಮತ್ತು ಅಭಿವೃದ್ಧಿ ಸಮೂಹ ಸಂಸ್ಥೆ ಮತ್ತು ಭಾರಿ ವಾಹನಗಳ ಪ್ರಮುಖ ತಯಾರಕ ಸಂಸ್ಥೆಯಾದ ಅಶೋಕ್ ಲೈಲ್ಯಾಂಡ್ ಕೈಜೊಡಿಸಿ ಸುಮಾರು 13 ಲಕ್ಷ ವೆಚ್ಚದಲ್ಲಿ 54 ಸೀಟಿನ ಈ ಬಸ್ಸನ್ನು ಅಭಿವೃದ್ಧಿಗೊಳಿಸಿದೆ. ಒಮ್ಮೆ 80 ಕಿಲೋಗ್ರಾಮ್‌ನಷ್ಟು ಜೈವಿಕ ಇಂಧನವನ್ನು ಈ ಬಸ್ಸಿನ ಇಂಧನ ಟ್ಯಾಂಕ್‌ನಲ್ಲಿ ತುಂಬಿಸಬಹುದಾಗಿದ್ದು ಪ್ರತಿ ಕಿಲೋಗ್ರಾಮ್‌ಗೆ 20 ಕಿಲೋ ಮೀಟರ್‌ನಂತೆ ಒಟ್ಟು 1600 ಕಿಲೋ ಮೀಟರ್ ಚಲಿಸಬಲ್ಲದ್ದಾಗಿದೆ. ಒಂದು ವರ್ಷದೊಳಗಾಗಿ ಕೋಲ್ಕತ್ತಾದ ವಿವಿಧ ಮಾರ್ಗಗಳಲ್ಲಿ ಇನ್ನೂ 15 ಬಸ್‌ಗಳಿಗೆ ಚಾಲನೆ ದೊರೆಯಲಿದೆ.

**ಕಳೆದ ಮಾರ್ಚ್ 10 ರಂದು ಮುಂಬೈ ಮತ್ತು ನಾಶಿಕ್ ನಗರಗಳ ನಡುವೆ ಓಡುವ ಪಂಚವಟಿ ಎಕ್ಸ್ಪ್ರೆಸ್ ರೈಲಿನ ಮೂರನೇ ದರ್ಜೆಯ ಹವಾನಿಯಂತ್ರಿತ ಬೋಗಿಯ ಪ್ರಯಾಣಿಕರೆಲ್ಲ ವಿಶಿಷ್ಟವಾದ ಕಾರ್ಯಕ್ರಮವೊಂದಕ್ಕೆ ಸಾಕ್ಷಿಯಾದರು. ಅದುವೇ ಪ್ರಯಾಣಿಕರಿಂದಲೇ ನಿರ್ವಹಣೆಯನ್ನು ಕಾಣುತ್ತಿರುವ ಆ ಬೋಗಿಯ 10ನೇ ವರ್ಷದ ವಾರ್ಷಿಕೋತ್ಸವದ್ದು. ಈ ಬೋಗಿಯಲ್ಲೇ ನಿಯಮಿತವಾಗಿ ಮಾಸಿಕ ಪಾಸಿನಲ್ಲಿ ಅಡ್ಡಾಡುವ ಪ್ರಯಾಣಿಕರು ಕಳೆದ 10 ವರ್ಷಗಳಿಂದ ಈ ಬೋಗಿಯ ನಿರ್ವಹಣೆಯಲ್ಲಿ ತೊಡಗಿಕೊಂಡಿದ್ದಾರೆ. ಮದ್ಯಪಾನ, ಇಸ್ಪೀಟು ಗಳಿಗೆ ಈ ಬೋಗಿಯಲ್ಲಿ ಅವಕಾಶವಿಲ್ಲ. ಕಸ, ಕೊಳೆಗೆ ಇಲ್ಲಿ ಪ್ರವೇಶವಿಲ್ಲ. ಹಗಲಿನಲ್ಲಿ ದೀಪ ಆರಿಸುವುದು, ಬರ್ತ್, ದಿಂಬಿನ ಹೊದಿಕೆಗಳನ್ನು ಸ್ವಚ್ಚಗೊಳಿಸುವುದು ಎಲ್ಲವನ್ನೂ ಪ್ರಯಾಣಿಕರೇ ಮಾಡುತ್ತಾರೆ. ಈ ಬೋಗಿಗೆ "ಆದರ್ಶ" ಎಂಬ ಯತಾರ್ಥವಾದ ಹೆಸರಿದೆ. ಬೋಗಿಯ ನಿರ್ವಹಣೆಯನ್ನು ಮಾಡುವ ಪ್ರಯಾಣಿಕರ ಬದ್ದತೆ ಭಾರತೀಯ ರೈಲ್ವೆಗೂ ಆದರ್ಶವಾಗಿದೆ.**



ನಾಗಪುರದ ವಲ್ಣಿ ಗ್ರಾಮದ ನಿವಾಸಿಗಳು ನಿರುಪಯುಕ್ತವೆನಿಸಿದ್ದ ಪ್ಲಾಸ್ಟಿಕ್ ಶೀಟುಗಳನ್ನೇ ಬಳಸಿಕೊಂಡು ತಮ್ಮ ನೀರ ಕೊರತೆಯನ್ನು ನೀಗುವಲ್ಲಿ ಸಫಲರಾಗಿದ್ದಾರೆ. ಗ್ರಾಮದ ಹೊಂಡಕೊಳ್ಳಗಳು ಮಳೆನೀರನ್ನು ಸಂಗ್ರಹಿಸುವಲ್ಲಿ ಸಮರ್ಪಕವಾಗಿಲ್ಲದ್ದನ್ನು ಕಂಡುಕೊಂಡ ಗ್ರಾಮಸ್ಥರಿಗೆ ಪರಿಹಾರವಾಗಿ ಕಂಡದ್ದೇ ಅನುಪಯುಕ್ತ ಪ್ಲಾಸ್ಟಿಕ್. ಮಳೆಗಾಲದಲ್ಲಿ ಕೊಳ್ಳಗಳಲ್ಲಿ ಸಂಗ್ರಹಗೊಂಡ ನೀರು ಬೇಸಿಗೆ ಬರುವಹೊತ್ತಿಗೆಲ್ಲ ಬತ್ತಿ ಹೋಗುತ್ತಿತ್ತು. ಆಗ ಗ್ರಾಮಸ್ಥರಿಗೆ ಹೊಳೆದದ್ದೇ ಪ್ಲಾಸ್ಟಿಕ್ ಶೀಟುಗಳು ಹಾಗೂ ಚೀಲಗಳನ್ನು ಬಳಸುವ ಯೋಚನೆ. ನಿರುಪಯೋಗಿ ಪ್ಲಾಸ್ಟಿಕನ್ನು ಹೊಲಿದು ದೊಡ್ಡದಾದ ಶೀಟುಗಳನ್ನು ಮಾಡಿ ಅದನ್ನೇ ಹೊಂಡಕ್ಕೆ ಹೊದಿಸಿ ಮಳೆನೀರ ಸಂಗ್ರಹಣೆಗೆ ತೊಡಗಿದರು. ಮೊದಲೆಲ್ಲ ಡಿಸೆಂಬರ್ ವರೆಗೆ ಇಂಗಿಹೊಗುತ್ತಿದ್ದ ಮಳೆನೀರು ಈ ರೀತಿಯಲ್ಲಿ ಸಂಗ್ರಹಿಸಿದ ನಂತರ ಏಪ್ರಿಲ್– ಮೇ ವರೆಗೂ ಹಿಡಿದಿಟ್ಟುಕೊಳ್ಳುವಂತಾಗಿದೆ. ಹಾಗೆಯೇ ಗ್ರಾಮದ ಪ್ಲಾಸ್ಟಿಕ್ ಕಸದ ನಿವಾರಣೆಗೂ ಉಪಾಯವೊಂದು ಸಿಕ್ಕಂತಾಗಿದೆ.

**ಬೆಂಗಳೂರಿನ ಬಸವನ ಗುಡಿ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಒಂದರಲ್ಲಿ ಜೀವನ ಸಾಗಿಸುವುದಕ್ಕಾಗಿ ಕೆಲಸ ಮಾಡುತ್ತಿರುವ ಕಿರಣ್ ತನ್ನ ವಿಶಿಷ್ಟ ಸಾಮಾಜಿಕ ಕಳಕಳಿ ಮೂಲಕ ಸುದ್ದಿ ಆಗಿದ್ದಾರೆ. ತಾನು ಕೆಲಸ ಮಾಡುತ್ತಿರುವ ಸುತ್ತಮುತ್ತಲಲ್ಲಿ ಕಿರಣ್ ತನ್ನದೇ ಶೈಲಿಯಲ್ಲಿ ಜನರಿಗೆ ನೆರವಾಗುತ್ತಿದ್ದಾರೆ. ರಸ್ತೆ ಅಪಘಾತ ನಡೆದಾಗ ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆ ನೀಡುತ್ತಾರೆ. ಕೆಟ್ಟುಹೋಗಿರುವ ಬೀದಿದೀಪಗಳನ್ನು ರಿಪೇರಿ ಮಾಡುತ್ತಾರೆ. ಅಪಘಾತದ ಸಮಯದಲ್ಲಿ ರಸ್ತೆ ಮೇಲೆ ಎಚ್ಚರಿಕೆ ಫಲಕಗಳನ್ನು ತಂದಿಡುತ್ತಾರೆ. ಆರಂಭದಲ್ಲಿ ಕಿರಣ್‌ಗೆ ಪ್ರಥಮ ಚಿಕಿತ್ಸೆಯ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಆದರೆ ಆತ ಕೆಲಸ ಮಾಡುತ್ತಿದ್ದ ಪೆಟ್ರೋಲ್ ಬಂಕ್‌ನಲ್ಲಿ ತುರ್ತು ಸಮಯದಲ್ಲಿ ಏನು ಮಾಡಬೇಕು ಅನ್ನುವುದನ್ನು ಹೇಳಿಕೊಡುತ್ತಿದ್ದರು. ಇದನ್ನು ಕಿರಣ್ ಈಗ ತನ್ನದೇ ಶೈಲಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ತನ್ನ ಸಮಾಜ ಸೇವೆಯನ್ನು ತನ್ನದೇ ಹಣದಲ್ಲಿ ಮಾಡುವ ಕಿರಣ್ ಸರಕಾರದಿಂದಾಗಲಿ ಅಥವಾ ತಾನು ಕೆಲಸ ಮಾಡುವ ಪೆಟ್ರೋಲ್ ಬಂಕ್ ಮಾಲೀಕನಿಂದಾಗಲೀ ಒಂದು ನಯಾಪೈಸೆಯನ್ನು ಕೂಡ ಬಯಸುತ್ತಿಲ್ಲ.**



9.2 ಕಿ. ಮೀ ಉದ್ದದ ಜಮ್ಮು ಮತ್ತು ಶ್ರೀನಗರ ರಸ್ತೆಯಲ್ಲಿನ ಚೇನಾನಿ – ನಶ್ರಿ ಸುರಂಗವನ್ನು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆ ಮಾಡಿದರು. ಇದರಿಂದ ಜಮ್ಮು ಮತ್ತು ಶ್ರೀನಗರದ ನಡುವಿನ ಅಂತರವನ್ನು ಇದು 30 ಕಿ.ಮೀ. ಗಳಷ್ಟು ಕಡಿಮೆಗೊಳಿಸಲಿದೆ ಮತ್ತು ಪ್ರಯಾಣದ ಅವಧಿ 2 ಗಂಟೆಗಳಷ್ಟು ಕಡಿಕೆಯಾಗಲಿದೆ.



**ಗುಜರಾತಿನ ನೂತನ ಪೊಲೀಸ್ ಮುಖ್ಯಸ್ಥರಾಗಿ ಗೀತಾ ಜೋಹ್ರಿ ನೇಮಕಗೊಂಡಿದ್ದಾರೆ. ಗುಜರಾತಿನ ಮೊದಲ ಮಹಿಳಾ ಡಿಜಿಪಿಯಾಗಿ ನೇಮಕವಾಗಿರುವ ಇವರು ಸೊಹ್ರಾಬುದ್ದೀನ್ ಎನಕೌಂಟರ್‌ನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮಹಿಳೆಯನ್ನು ಪೊಲೀಸ್ ಮುಖ್ಯಸ್ಥರನ್ನಾಗಿ ನೇಮಿಸಿದ ಗುಜರಾತ್ ಸರ್ಕಾರದ ನಿರ್ಧಾರಕ್ಕೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ.**

## ಸಾಲುದ್ದದ ಸುದ್ದಿಗಳು

ಒಂದು ಲಕ್ಷ ರೂಪಾಯಿಗಿಂತ ಕಡಿಮೆ ಸಾಲ ಹೊಂದಿರುವ ಕೃಷಿಕರ ಸಾಲವನ್ನು ಉತ್ತರ ಪ್ರದೇಶ ಸರ್ಕಾರ ಮನ್ನಾ ಮಾಡಿದೆ. ಇದರಿಂದ ಸುಮಾರು 2.15 ಕೋಟಿ ರೈತರಿಗೆ ಪ್ರಯೋಜನವಾದರೆ, ರಾಜ್ಯ ಸರ್ಕಾರಕ್ಕೆ 36,359 ಕೋಟಿ ಹೊರೆಯಾಗಲಿದೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿ ಇದು ಒಂದು ಮಹತ್ತ್ವದ ಯೋಜನೆಯಾಗಿತ್ತು. ಸರ್ಕಾರ ರಚನೆಯಾಗಿ ಒಂದು ತಿಂಗಳಿಗೂ ಮೊದಲೇ ಇದನ್ನು ಜಾರಿಗೆ ತಂದಿರುವುದು ಒಂದು ಒಳ್ಳೆಯ ಬೆಳವಣಿಗೆ.

**ದಕ್ಷಿಣ ಬೆಂಗಳೂರಿನ ಜ್ಯೋತಿ ತಾಂತ್ರಿಕ ಮಹಾವಿದ್ಯಾಲಯದ ಇನ್‌ಕುಬೇಶನ್ ಕೇಂದ್ರದಲ್ಲಿನ ಇಬ್ಬರ ತಂಡ 90 ಸೆಕೆಂಡಿನಲ್ಲಿ ರಕ್ತಸ್ರಾವ ನಿಲ್ಲಿಸಬಲ್ಲ ಸಾಧನವನ್ನು ಸಂಶೋಧಿಸಿದ್ದಾರೆ. ಕಾರ್ಬೋಕ್ಸಿಲ್ ಲಿಂಕ್ಡ್ ಗ್ರಾಫೀನ್ ಸ್ಪಾಂಜ್ ಹೆಸರಿನ ಈ ಉತ್ಪನ್ನ ಸೇನೆಯಲ್ಲಿ ಗಾಯಗೊಂಡ ಸೈನಿಕರು ರಕ್ತಸ್ರಾವ ತಡೆಯಲು ಬಳಸಲಾಗುವ ಎಕ್ಸಿಯೋಸ್ಟಾಟ್ ಸ್ಪಾಂಜ್ ಮಾದರಿಯಲ್ಲೇ ಬಳಕೆಯಾಗಲಿದೆ. ಈಗ ಬಳಸುವ ಎಕ್ಸಿಯೊಸ್ಟಾಟ್ ಸ್ಪಾಂಜ್ ರಕ್ತಸ್ರಾವ ತಡೆಯಲು 3–4 ನಿಮಿಷ ತೆಗೆದುಕೊಳ್ಳುತ್ತದೆ. ಈ ಸಂಶೋಧನೆಗಾಗಿ ಪೇಟೆಂಟ್ ಅರ್ಜಿ ಸಲ್ಲಿಸಿರುವ ಮಾಡಿದ ಎಮ್ ಎಸ್ ಸಂತೋಷ್ ಮತ್ತು ದಿವಾಕರ್ ಎಮ್ ಬಿ ಶೃಂಗೇರಿ ಮಠದಿಂದ ಪಡೆದ 30 ಕೋಟಿ ರೂಪಾಯಿ ಅನುದಾನದಲ್ಲಿ ಸಂಶೋಧನೆ ನಡೆಸಿದ್ದರು.**




ಜಮ್ಮು ಕಾಶ್ಮೀರದಲ್ಲಿ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಕನಿಷ್ಟ 9 ಗುಂಡುಗಳಿಗೆ ಎದೆಯೊಡ್ಡಿ ಕಳೆದ ಎರಡು ತಿಂಗಳಿನಿಂದ ಕೋಮಾಕ್ಕೆ ಜಾರಿದ್ದ, ಸೆಂಟ್ರಲ್ ರಿಸರ್ವ ಪೋಲೀಸ್ ಫೋರ್ಸ್‌ನ (CRPF) ಕಮಾಂಡರ್ ವೀರಯೋಧ ಚೇತನ್ ಕುಮಾರ್ ಚೀಟಾ ಕೋಮಾದಿಂದ ಆಚೆ ಬಂದಿದ್ದು ಮತ್ತೆ ಮಾತನಾಡತೊಡಗಿದ್ದಾರೆ. ಇದನ್ನು ಒಂದು ಚಮತ್ಕಾರ ಎಂದೇ ಹೇಳಲಾಗುತ್ತಿದ್ದು ಅವರಿಗೆ ಚಿಕಿತ್ಸೆ ನೀಡುತ್ತಿದ್ದ ದೆಹಲಿ ಏಮ್ಸ್ ಆಸ್ಪತ್ರೆಯ ವೈದ್ಯರು ಚೇತನ್‌ಕುಮಾರ ಮನೆಗೆ ತೆರಳಬಹುದು ಎಂದು ಹೇಳಿದ್ದಾರೆ. ಕಳೆದ ಫೆಬ್ರುವರಿ 14ರಂದು ಕಾಶ್ಮೀರದ ಬಂಡಿಪೋರಾ ಜಿಲ್ಲೆಯ ಹಾಜಿನ್ ಇಲಾಖೆಯಲ್ಲಿ ನಡೆದ ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಯಲ್ಲಿ ಮೂರು ಯೋಧರು ಹುತಾತ್ಮರಾಗಿ ಓರ್ವ ಉಗ್ರ ಕೊಲ್ಲಲ್ಪಟ್ಟನು. ಈ ಗುಂಡಿನ ಚಕಮಕಿಯಲ್ಲಿ ಚೀಟಾ ಗುಂಡೇಟಿನಿಂದ ತೀವ್ರ ಗಾಯಗೊಂಡರು. ಕೋಮಾದಿಂದ ಹೊರಬರಲು ಚೇತನ್‌ಕುಮಾರ್‌ಗೆ ಇದ್ದ ಅಸೀಮ ಆತ್ಮವಿಶ್ವಾಸವೇ ಕಾರಣ ಎಂದು ಅವರ ಪತ್ನಿ ಉಮಾ ಸಿಂಗ್ ಹೇಳೀದ್ದಾರೆ.

**ಕಳೆದ ಮಾರ್ಚನಲ್ಲಿ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಭಾರತೀಯ ರೇಲ್ವೆ 1.68 ಲಕ್ಷ ಕೋಟಿ ರೂಗಳ ಆದಾಯ ಗಳಿಸಿದ್ದು ಇಲಾಖೆಯ ಐತಿಹಾಸಿಕ ಗರಿಷ್ಠ ಆದಾಯವಾಗಿದೆ. ಸರಕು ಸಾಗಾಣಿಕೆಯ ರೈಲುಗಳ ಸಂಚಾರದ ಸಮರ್ಪಕ ನಿರ್ವಹಣೆ ಮತ್ತು ಪ್ರಯಾಣಿಕರ ರೈಲು ವ್ಯವಸ್ಥೆಯಲ್ಲಿ ನವೀನ ಮಾದರಿಗಳನ್ನು ಅನುಸರಿಸಿದುದರಿಂದ ರೈಲ್ವೇ ಇಲಾಖೆಯ ಆದಾಯದಲ್ಲಿ ಗಣನೀಯ ಹೆಚ್ಚಳ ಉಂಟಾಗಿದೆ. ಸರಕು ಸಾಗಣೆಯಿಂದ 1.09ಲಕ್ಷ ಕೋಟಿ, ಪ್ರಯಾಣಿಕರ ಟಿಕೆಟ್‌ಗಳಿಂದ 48ಸಾವಿರ ಕೋಟಿ ಹಾಗೂ ಇತರ ಮೂಲಗಳಿಂದ 11ಸಾವಿರ ಕೋಟಿ ಆದಾಯ ಗಳಿಸಿದೆ. ಆದರೆ ಭಾರತೀಯ ರೈಲ್ವೆಯ ನಿರ್ವಹಣಾ ವೆಚ್ಚ ಶೇ 95ರಷ್ಟಿದೆ ಎನ್ನುವುದನ್ನು ಗಮನಿಸಬಹುದು.**

5 ಕೋಟಿ ಗಿಡಗಳನ್ನು ರೈಲ್ವೇ ಹಳಿಗಳ ಪಕ್ಕದಲ್ಲಿ ಇನ್ನು ಎರಡು ವರ್ಷಗಳಲ್ಲಿ ನೆಡುವುದಾಗಿ ರೈಲ್ವೇ ಸಚಿವ ಸುರೇಶ್ ಪ್ರಭು ಸಂಸತ್ತಿನಲ್ಲಿ ತಿಳಿಸಿದ್ದಾರೆ. ರಾಜ್ಯಗಳ ಅರಣ್ಯ ಇಲಾಖೆಗಳೊಂದಿಗೆ ಈ ಬಗ್ಗೆ ಒಪ್ಪಂದ ನಡೆಯುತ್ತಿದ್ದು ಈಗಾಗಲೇ ಕರ್ನಾಟಕ, ಪಶ್ಚಿಮ ಬಂಗಾಳ, ಹರಿಯಾಣ, ಪಂಜಾಬ್ ಮತ್ತು ಅಸ್ಸಾಂ ರಾಜ್ಯಗಳೊಂದಿಗೆ ಒಪ್ಪಂದ ಜಾರಿಯಾಗಿದೆ ಎಂದು ಅವರು ತಿಳಿಸಿದರು. ಇದರ ಪ್ರಕಾರ, ರೈಲ್ವೇ ಇಲಾಖೆಗೆ ಸೇರಿದ ಜಾಗದಲ್ಲಿ ರಾಜ್ಯ ಅರಣ್ಯ ಇಲಾಖೆಗಳು ಗಿಡ ನೆಟ್ಟು ಬೆಳೆಸುವ ಜವಾಬ್ದಾರಿ ಹೊರುತ್ತವೆ. ಆದರೆ, ಜಾಗದ ಮಾಲಿಕತ್ವ ಮಾತ್ರ ರೈಲ್ವೇ ಇಲಾಖೆಯ ಬಳಿಯೇ ಇರುತ್ತದೆ ಮತ್ತು ಅಭಿವೃದ್ಧಿ ಯೋಜನೆಗೆ ಅಗತ್ಯವಾದಾಗ ತನ್ನ ಜಾಗವನ್ನು ಉಪಯೋಗಿಸಿಕೊಳ್ಳಲು ಇಲಾಖೆ ಸ್ವತಂತ್ರವಾಗಿರುತ್ತದೆ.

**ಮುಂಬೈನ ಮಲಬಾರ್ ಹಿಲ್ಸ್ ಪ್ರದೇಶ ವಿಶಾಲ 2.5ಎಕರ ಪ್ರದೇಶದಲ್ಲಿ ಹರಡಿರುವ 400 ದಶಲಕ್ಷ ಡಾಲರ್ ಬೆಲೆಬಾಳುವ ಜಿನ್ನಾ ಹೌಸನ್ನು ತನಗೆ ನೀಡಬೇಕು ಎಂದು ಪಾಕಿಸ್ತಾನ ಸರ್ಕಾರ ಬೇಡಿಕೆ ಇಟ್ಟಿದೆ. ಬಿಜೆಪಿಗೆ ಸೇರಿದ ಜನಪ್ರತಿನಿಧಿ ಮಂಗಲ್ ಲೋಢಾ ಈ ಕಟ್ಟಡವನ್ನು ನೆಲಸಮಮಾಡಿ ಇಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ನಿರ್ಮಿಸಬೇಕು. ಈ ಕಟ್ಟಡವು ದೇಶವಿಭಜನೆ ಪ್ರತೀಕವಾಗಿದೆ, ಇಲ್ಲಯೇ ದೇಶವನ್ನು ಇಬ್ಭಾಗ ಮಾಡುವ ಷಡ್ಯಂತ್ರ ರೂಪಿಸಲಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಪಾಕಿಸ್ತಾನ ನಿರ್ಮಾತೃ ಮಹಮ್ಮದ್ ಅಲಿ ಜಿನ್ನಾ ಮಗಳು ದಿನಾ ವಾಡಿಯಾ ಈ ಆಸ್ತಿ ತನಗೆ ಸೇರಿಬೇಕೆಂದು ಹೇಳೀದರೆ, ಜಿನ್ನಾ ವಂಶಸ್ಥರೆಂದು ಹೇಳುವ ಮುಂಬೈ ನಿವಾಸಿಗಳು ತಮಗೆ ಸೇರಬೇಕೆಂದು ಕೋರ್ಟ ಮೆಟ್ಟಿಲೇರಿದ್ದಾರೆ. ದೇಶವಿಭಜನೆಯ ನಂತರ ಪಾಕಿಸ್ತಾನಕ್ಕೆ ಹೋದವರಿಗೆ ಸೇರಿದ ಸ್ಥಿರ ಮತ್ತು ಚರಾಸ್ತಿಗಳನ್ನು 'ನಿರ್ವಾಸಿತ ಆಸ್ತಿ' ಎಂದು ಗುರುತಿಸಿದ ಭಾರತ ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡಿತು. ಆದರೆ ಜಿನ್ನಾ ಹೌಸನ್ನು ಮಾತ್ರ ಸೌಹಾರ್ದದ ಸಂಕೇತವಾಗಿ ಅಂದಿನ ಪ್ರಧಾನಿ 'ನಿರ್ವಾಸಿತ ಆಸ್ತಿ' ಎಂದು ಗುರುತು ಮಾಡದಂತೆ ತಡೆದರು.**



95% 10:35 a.m.

Posts

Anche Kotresh
27 Feb at 7:25p.m.

ನಾನು ಬರೀ ಫೇಸ್ ಬುಕ್ ವೀರನಾಗೋಲ್ಲ , ಪ್ರತಿ ಭಾನುವಾರ ಮತ್ತು ರಜಾ ದಿನದಲ್ಲಿ ಕೊಟ್ಟೂರು ಕೆರೆಯಲ್ಲಿರುತ್ತೇನೆ , ದಯವಿಟ್ಟು ನೀವೂ ಬನ್ನಿ , ನಿಮ್ಮವರನ್ನೂ ಕರೆತನ್ನಿ , ಖಾರ ಮಂಡಕ್ಕಿ ತಿನ್ನೋಕಲ್ಲ , ಕೆರೆ ಕ್ಲೀನ್ ಮಾಡೋಕೆ , " ನಮ್ಮ ಕೆರೆ - ನಮ್ಮ ಹಕ್ಕು ,

Like Comment Share

You, Abid Chitradurga and 78 others

Siddharam Hiremath
ನಮ್ಮ ಹೆಮ್ಮೆಯ ಕೂಡ್ಲಿಗಿಯಲ್ಲಿ ತಮ್ಮ ಕಾರ್ಯಕ್ಕೆ ಬೆಂಬಲಿಸಿ ಪೋಸ್ಟ್ ಮಾಡಿರುವೆ ಹಾಗೂ ಕೈಜೋಡಿಸಲು ಮನವಿ ಮಾಡಿರುವೆ ಸರ್. ದಯವಿಟ್ಟು ಪರಿಶೀಲಿಸಿ. ತಮ್ಮೊಂದಿಗೆ ನಾನಿದ್ದೇನೆ
27 Feb at 7:29 p.m. • Like • 3 • Reply

Anche Kotresh ಧನ್ಯವಾದಗಳು ಸಾರ್

ಅಂಚೆ ಕೊಟ್ರೇಶ್ ಬಳ್ಳಾರಿಯ ಕೂಡ್ಲಗಿ ತಾಲೂಕಿನ ಕೊಟ್ಟೂರು ಪಟ್ಟಣದ ನಿವಾಸಿ. ಕೊಟ್ಟೂರಿನ ಪುರಾತನ ಕಾಲದ 700 ಎಕರೆ ಕೆರೆಯಲ್ಲಿ ತುಂಬಿದ್ದ ಜಾಲಿ ಮುಳ್ಳುಗಳ ತೆರವು ಮಾಡಲು ಇವರು ಒಬ್ಬರೇ ಮುಂದಾಗಿದ್ದರು. ಕಳೆದ 5 ವಾರಗಳ ಹಿಂದೆ ರವಿವಾರ ದಿನ ಇವರು ಒಬ್ಬರೇ ಕರೆಯಲ್ಲಿನ ಜಾಲಿ ಮುಳ್ಳುಗಳ ತೆರವು ಮಾಡುವ ಕೆಲಸ ಆರಂಭಿಸಿದ್ದರು. ಕೆರೆ ಸ್ವಚ್ಚಗೊಳಿಸುವ ಚಿತ್ರಗಳನ್ನು ಫೇಸ್ಬುಕ್ನಲ್ಲಿ ಪೋಸ್ಟ್ ಮಾಡಿ 'ನಮ್ಮ ಕೆರೆ ನಮ್ಮ ಹಕ್ಕು' ಎಂಬ ಘೋಷದೊಂದಿಗೆ ಕೆರೆ ಸ್ವಚ್ಛಗೊಳಿಸಲು ಕರೆ ನೀಡಿದ್ದರು. ಕ್ರೊಟ್ರೇಶರೊಂದಿಗೆ ಇದೀಗ ಕೊಟ್ಟೂರಿನ ಸುಮಾರು 150ಕ್ಕೂ ಹೆಚ್ಚು ಯುವಕರು ಪ್ರತಿ ಭಾನುವಾರು ಕೆರೆ ಸ್ವಚ್ಛಗೊಳಿಸುವ ಕೆಲಸದಲ್ಲಿ ಕೈಜೋಡಿಸದ್ದು ಇದೂವರೆಗೆ 200 ಎಕರೆಯಲ್ಲಿನ ಮುಳ್ಳುಗಳನ್ನು ತೆರವು ಮಾಡಲಾಗಿದೆ. ಸಾಮಾಜಿಕ ಜಾಲತಾಣದ ಸದ್ಬಳಕೆಯಿಂದ ಸಮಾಜಹಿತ ಕಾರ್ಯ ನಡೆಸುವ ಒಳ್ಳೆಯ ಉದಾಹರಣೆ ಇದಾಗಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-4-2017



# ಸಾಮಾಜಿಕ ಸಾಮರಸ್ಯ – ಹೀಗೊಂದು ಅನುಕರಣೀಯ ಆಚರಣೆ

ಕುಮಟಾದಲ್ಲಿ ಒಂದು ಮನೆಯಲ್ಲಿ ಉಪನಯನ ಕಾರ್ಯಕ್ರಮ ಏರ್ಪಾಟಾಗಿತ್ತು. ಅದು ಸಂಘದ ಸ್ವಯಂಸೇವಕರೊಬ್ಬರ ಮನೆ. ತಮ್ಮ ಮನೆಯ ಉಪನಯನಕ್ಕೆ ಬರಬೇಕೆಂದು ಸಂಘದ ಪ್ರಚಾರಕರೊಬ್ಬರನ್ನು ಅವರು ಆಹ್ವಾನಿಸಿದರು. ಅದಕ್ಕೆ ಸಮ್ಮತಿಸಿದ ಆ ಹಿರಿಯರು ಆ ಮನೆಯ ಯಜಮಾನನಿಗೊಂದು ಷರತ್ತು ಹಾಕಿದರು. ನಿಮ್ಮ ಮನೆಯ ಕಾರ್ಯಕ್ರಮಕ್ಕೆ ನಿಮ್ಮ ಊರಿನಲ್ಲಿರುವ ಎಲ್ಲ ಜಾತಿಯವರನ್ನೂ ಕರೆಯುತ್ತೀರಾ ಎಂದು ಕೇಳಿದರು. ತಮ್ಮ ಪರಿಚಯದವರನ್ನು ಕರೆಯಬೇಕೆಂಬ ಯೋಚನೆಯಿತ್ತೇ ಹೊರತು ಎಲ್ಲಾ ಜಾತಿಯವರನ್ನು ಕರೆಯಬೇಕೆಂದೇನೂ ಇವರು ಯೋಚಿಸಿರಲಿಲ್ಲ. ಇದೊಂದು ಹೊಸ ಸವಾಲೆನಿಸಿತು. ಆದರೂ, ಸರಿ ಎಂದು ಒಪ್ಪಿದರು. ಮನೆಗೆ ಬಂದು ಕುಳಿತು ತಮ್ಮ ಊರಿನಲ್ಲಿರುವ ಬೇರೆ ಬೇರೆ ಜಾತಿಯವರ ಪಟ್ಟಿ ಮಾಡಿದರು. ಸುಮಾರು 10–12 ಜಾತಿಯ ಪ್ರಮುಖರನ್ನು ಅವರವರ ಮನೆಗೇ ಹೋಗಿ ಆಹ್ವಾನಿಸಿದರು. ಆಹ್ವಾನಿತರಾದವರಿಗೂ ಅದು ಅಚ್ಚರಿಯೇ. ಹಲವರಿಗೆ ಇವರ ಪರಿಚಯವೇ ಇರಲಿಲ್ಲ. ಇದೇ ಮೊದಲ ಬಾರಿಗೆ ಅವರಿಗೆ ಇಂತಹ ಅನುಭವ.


ಕಾರ್ಯಕರಮದ ದಿನ ಅವರೆಲ್ಲರೂ ಬಂದರು. ಅವರಿಗೆಲ್ಲ ಸತ್ಕಾರ ನಡೆಯಿತು. ಬೇರೆ ಬೇರೆ ಜಾತಿಯವರೆಲ್ಲ ಒಟ್ಟಿಗೆ ಬೆರೆತರು. ಕುಟುಂಬಗಳ ನಡುವೆ ಸ್ನೇಹ ಬೆಳೆಯಿತು. ಸಾಮಾಜಿಕ ಸಾಮರಸ್ಯದ ನಿಟ್ಟಿನಲ್ಲಿ ಇದೊಂದು ಹೊಸ ಹೆಜ್ಜೆಯಾಯಿತು. ಅನಂತರ ಇಂತಹದ್ದೇ ಪ್ರಯತ್ನಗಳು ಅನೇಕ ಊರುಗಳಲ್ಲಿ ನಡೆದವು. ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ಸಿಕ್ಕಿತು. ಜಾತಿ ವಿರೋಧಿ ಘೋಷಣೆ ಕೂಗಿದ ಮಾತ್ರಕ್ಕೆ ಅಥವಾ ಯಾರನ್ನೋ ದೂಷಿಸಿದ ಮಾತ್ರಕ್ಕೆ ಅದೇನೂ ಅಳಿಸಿ ಹೋಗದು. ಇಂತಹ ಉತ್ತಮ ಪ್ರಯತ್ನಗಳು ನಡೆದಾಗ ಮಾತ್ರ ಒಂದು ಸಮರಸ ಸಮಾಜದ ನಿರ್ಮಾಣ ಸಾಧ್ಯ. ನಾವೆಲ್ಲ ಹಿಂದು, ನಾವೆಲ್ಲ ಬಂಧು ಎನ್ನುವುದಕ್ಕೆ ಒಂದು ಅರ್ಥ ಕೊಡಲು ಸಾಧ್ಯ.

# ವನವಾಸಿ ಕಲ್ಯಾಣದ ಪ್ರಯತ್ನ: ಬೆಳಕು ಕಂಡ ಬ್ಯಾಣದಳ್ಳಿ

ಅಂಕೋಲ ತಾಲೂಕಿನ ಬ್ಯಾಣದಳ್ಳಿ ಕಾಡಿನ ಮಧ್ಯೆ ಗುಡ್ಡದ ತುದಿಯಲ್ಲಿನ ಒಂದು ಚಿಕ್ಕ ಹಳ್ಳಿ. ವನವಾಸಿಗಳ ಈ ಹಾಡಿಗೆ ರಸ್ತೆ, ವಿದ್ಯುತ್, ಶಾಲೆ, ಆಸ್ಪತ್ರೆ ಯಾವುದೂ ಇಲ್ಲ. ಹಾಗಾಗಿ ಯಾವ ಸರ್ಕಾರಿ ಅಧಿಕಾರಿಯೂ ಇಲ್ಲಿಗೆ ಹೋಗಿಲ್ಲ. ಸರ್ಕಾರಿ ಸವಲತ್ತುಗಳೂ ಇಲ್ಲಿಗೆ ತಲುಪಿಲ್ಲ. ಇದೇ ಹಳ್ಳಿಯ ಕೇಶವ ಮರಾಠಿ ಎಂಬ ಯುವಕ ವನವಾಸಿ ಕಲ್ಯಾಣದ ಬೆಂಗಳೂರಿನ ಕಾರ್ಯಾಲಯದಲ್ಲಿದ್ದುಕೊಂಡು ಇಂಜಿನಿಯರಿಂಗ್ ಮಾಡುತ್ತಿದ್ದಾನೆ. ಆತನ ಪ್ರಯತ್ನದಿಂದ ಆ ಊರಿನಲ್ಲಿ 'ಬ್ಯಾಣದಳ್ಳಿ ಉತ್ಸವ' ಆಯೋಜನೆಯಾಯಿತು. ಸರ್ಕಾರಿ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ಇದಕ್ಕಾಗಿ ಸಂಪರ್ಕಿಸಲಾಯಿತು. ಉತ್ಸವಕ್ಕಾಗಿ ಒಂದು ಕಚ್ಚಾ ರಸ್ತೆ ನಿರ್ಮಾಣವಾಯಿತು. ನಿಂತುಹೋದ ಶಾಲೆಗೆ ಶಿಕ್ಷಕರ ನೇಮಕ, ಬಿಸಿಯೂಟದ ವ್ಯವಸ್ಥೆ, ರಸ್ತೆ, ವಿದ್ಯುತ್ ಸಂಪರ್ಕ ಕಲ್ಪಿಸುವ ಭರವಸೆ ಜಿಲ್ಲಾಡಳಿತದಿಂದ ದೊರೆಯಿತು. ಸಮಾಜದ ಎಲ್ಲ ವರ್ಗದ ಜನರು ಉತ್ಸವದಲ್ಲಿ ಸಂಭ್ರಮದಿಂದ ಭಾಗವಹಿಸಿದರು.

ಇದರ ಪರಿಣಾಮವಾಗಿ, ಶಾಲೆಯ ಮತ್ತು ಅಂಗನವಾಡಿ ಶಿಕ್ಷಕಿಯರಿಗೆ ಗೌರವಧನ ನೀಡುವ ವ್ಯವಸ್ಥೆಯನ್ನು ಸ್ಥಳೀಯ ಶಾಸಕರು ಮಾಡಿದರು. ಹೀಗೆ ಒಬ್ಬ ವಿದ್ಯಾರ್ಥಿಯ ಪ್ರಯತ್ನದಿಂದ ಒಂದು ಊರೇ ಪರಿವರ್ತನೆಯನ್ನು ಕಾಣುವಂತಾದದ್ದು ಒಂದು ಉತ್ತಮ ಬೆಳವಣಿಗೆ. ನಗರದಲ್ಲಿರುವ ಎಲ್ಲರೂ ತಮ್ಮ ತಮ್ಮ ಊರಿನ ಅಭಿವೃದ್ಧಿಗೆ ಸ್ವಲ್ಪ ಗಮನ ಕೊಟ್ಟರೆ, ಗ್ರಾಮ ವಿಕಾಸದ ಕನಸು ಬಹುಬೇಗ ಕೈಗೂಡುವುದರಲ್ಲಿ ಸಂಶಯವಿಲ್ಲ.

ಹೊಸ ಪ್ರಕಟಣೆಗಳು




ಪುಟಗಳು : xxii + 354
ಬೆಲೆ: ರೂ. 250.00

## ಸಂನ್ಯಾಸಿ ಆಂದೋಲನ



ಲೇಖಕರು: ಬಿ.ಪಿ. ಪ್ರೇಮಕುಮಾರ್

ಭಾರತೀಯ ಪರಂಪರೆ ಯೋಗಿ – ಯೋಧ – ಇಬ್ಬರನ್ನೂ ಸಮಾನವಾಗಿ ಆದರಿಸಿದೆ; ಧರ್ಮ – ಸಂಸ್ಕೃತಿ – ಸದಾಚಾರಗಳ ರಕ್ಷಣೆಯ, ಪೋಷಣೆಯ ಕರ್ಣಧಾರರು – ಎಂದು ಪರಿಗಣಿಸಿದೆ. ಯೋಗಿ–ಯೋಧರಿಬ್ಬರೂ ಸಮಾನ ಗೌರವಾರ್ಹರು ಎಂಬುದನ್ನು ನಮ್ಮ ಇತಿಹಾಸವೂ ಮತ್ತೆ ಮತ್ತೆ ಪ್ರಮಾಣೀಕರಿಸಿದೆ. ವಿಶ್ವಾಮಿತ್ರ–ರಾಮ; ಸಾಂದೀಪನಿ–ಕೃಷ್ಣ; ಚಾಣಕ್ಯ–ಚಂದ್ರಗುಪ್ತ; ವಿದ್ಯಾರಣ್ಯರು–ಹಕ್ಕಬುಕ್ಕ; ಸಮರ್ಥ ರಾಮದಾಸರು–ಶಿವಾಜಿ – ಹೀಗೆ ಯೋಗಿ ಯೋಧರ ಅಕ್ಷುಣ್ಣ ಪರಂಪರೆ ನಮ್ಮೀ ಸಂಸ್ಕೃತಿ ಪ್ರವಾಹವನ್ನು ಕಾಪಿಟ್ಟಿದೆ.

ಹದಿನೇಳು–ಹದಿನೆಂಟನೆಯ ಶತಮಾನದಲ್ಲಿಯೂ, ವ್ಯಾಪಾರದ ಸೋಗಿನಲ್ಲಿ ಕಪಟತೆ–ವಂಚನೆಯ ಸಾಧನಗಳನ್ನು ಹಿಡಿದುಬಂದ ಬ್ರಿಟಿಷರನ್ನು ಈ ದೇಶವು ಸಂಸ್ಕೃತಿಯ ವೈರಿಗಳು ಎಂದು ಗುರುತಿಸಿತು. ಅವರೊಂದಿಗೆ ಮೊದಲು ಕಾದಾಟಕ್ಕೆ ನಿಂತವರು ಯೋಗಿಗಳು ಅರ್ಥಾತ್ ಸಂನ್ಯಾಸಿಗಳು. ತಮ್ಮ ಕೂಟನೀತಿಗಳ ಮೂಲಕ ಬಂಗಾಳವನ್ನು ವಶಪಡಿಸಿಕೊಂಡ ಬ್ರಿಟಿಷರ ವಿರುದ್ಧ ಅರ್ಧಶತಮಾನ ಕಾಲ ಲಕ್ಷಾಂತರ ಸಂನ್ಯಾಸಿಗಳು ಸತತವಾಗಿ ಸೆಣಸಿದರು; ಬ್ರಿಟಿಷರಿಗೆ 'ಭಾರತ ಸುಲಭದ ತುತ್ತಲ್ಲ' ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಕಲ್ಲು–ದೊಣ್ಣೆಗಳನ್ನೂ ಈಟಿ–ಭರ್ಜಿಗಳನ್ನೂ ಆಯುಧಗಳನ್ನಾಗಿ ಮಾಡಿಕೊಂಡು ಬಂಗಾಳದ (ಈಗಿನ ಬಿಹಾರ–ಒರಿಸ್ಸಾದ ಕೆಲವು ಭಾಗಗಳು, ಪಶ್ಚಿಮಬಂಗಾಳ, ಬಂಗ್ಲಾದೇಶ) ಆದ್ಯಂತ ಸಂಚರಿಸುತ್ತ ವ್ಯಾಪಕ ಜನಾಂದೋಲನ ನಡೆಸಿದ ಸಂನ್ಯಾಸಿಗಳು ಬ್ರಿಟಿಷರ ನಿದ್ದೆಗೆಡಿಸಿದರು. ಈ ಅನುಪಮ ಹೋರಾಟ ನಡೆದ ಶತಮಾನದ ನಂತರ ಇದೇ ಹೋರಾಟದ ಎಳೆಯೊಂದನ್ನು ಹಿಡಿದು ಬಂಕಿಮಚಂದ್ರರು ರಚಿಸಿದ 'ಆನಂದಮಠ' ಕಾದಂಬರಿ ನೀಡಿದ 'ವಂದೇಮಾತರಂ' ರಣಮಂತ್ರ ಆಮೇಲಿನ ದಿನಗಳಲ್ಲಿ ಇಡೀ ದೇಶವನ್ನು ಬಡಿದೆಬ್ಬಿಸಿದುದು ಸುವಿದಿತ.

ಭಾರತವನ್ನು ಕಬಳಸಲೆಂದು ಬಂಗಾಳದ ಮೂಲಕ ಮೊದಲ ಹೆಜ್ಜೆಯಿಟ್ಟ ಬ್ರಿಟಿಷರಿಗೆ ಭಾರತೀಯ ಸಮಾಜದ ಅದಮ್ಯ ಪ್ರತಿರೋಧಶಕ್ತಿಯನ್ನು ಪರಿಚಯಿಸಿದ ಈ ಅಪೂರ್ವ ಹೋರಾಟದ ಅಪರೂಪದ ದಾಖಲೆಗಳನ್ನೂ ಒಳಗೊಂಡ ಸಂಶೋಧನಕೃತಿ – 'ಸಂನ್ಯಾಸಿ ಆಂದೋಲನ'

ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಮಳಿಗೆಗಳು:
ರಾಷ್ಟ್ರೋತ್ಥಾನ ಸಾಹಿತ್ಯ

'ಕೇಶವ ಶಿಲ್ಪ', ಕೆಂಪೇಗೌಡನಗರ, ಬೆಂಗಳೂರು – 560 019
ದೂರವಾಣಿ: 080–26612730, 31, 32;
ಫ್ಯಾಕ್ಸ್: 080–26610916
E-mail: sahitya@rashtrotthana.org

ನಂ. 14/3–ಎ, ನೃಪತುಂಗ ರಸ್ತೆ, ಬೆಂಗಳೂರು – 560 001.
ದೂರವಾಣಿ: 080–22271889
ಫ್ಯಾಕ್ಸ್: 080–26610916
web: sahityabooks.com

'ಅಜಿತ ಸ್ಮೃತಿ', 36ನೇ ಅಡ್ಡರಸ್ತೆ, 10ನೇ ಮುಖ್ಯರಸ್ತೆ, 4ನೇ ಹಂತ
ಜಯನಗರ, ಬೆಂಗಳೂರು – 560 011
ದೂರವಾಣಿ: 080–22441486

ವನವಾಸಿ ಕಲ್ಯಾಣ (ರಿ), ಕರ್ನಾಟಕ
ವನಶ್ರೀ, #1435/36, 2ನೇ ಅಡ್ಡರಸ್ತೆ, 5ನೇ 'ಎ' ಮುಖ್ಯರಸ್ತೆ, 'ಡಿ' ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

## ಸಮಾಜ ಸೇವಾಸಕ್ತ ಯುವಕ–ಯುವತಿಯರಿಗೆ ಆಹ್ವಾನ



ದುರ್ಗಮವಾದ ಕಾಡಿನಲ್ಲಿ, ಬೆಟ್ಟಗುಡ್ಡ ಪ್ರದೇಶಗಳಲ್ಲಿ ಶಾಲೆ, ರಸ್ತೆ, ಆಸ್ಪತ್ರೆ, ವಿದ್ಯುತ್ ಮತ್ತು ಸರಿಯಾದ ಮನೆಯೂ ಇಲ್ಲದೇ ಕಾಡಿನ ಹಾಡಿಗಳಲ್ಲಿ ಬದುಕುವ ನಮ್ಮದೇ ಸಮಾಜದ ಬಂಧುಗಳು ಲಕ್ಷಾಂತರ ಜನರಿದ್ದಾರೆ. ನಮ್ಮ ದೇಶದ ಸುಮಾರು 16,500 ಹಳ್ಳಿಗಳಲ್ಲಿ ವಾಸಿಸುತ್ತಿರುವ ಇಂತಹ ವನವಾಸಿಗಳ ಸಂಖ್ಯೆ ಸುಮಾರು 10 ಕೋಟಿಗಳಷ್ಟು. ನಮ್ಮ ಕರ್ನಾಟಕದಲ್ಲೂ ಸುಮಾರು 1,000 ಹಾಡಿಗಳಲ್ಲಿ ವಾಸಿಸುತ್ತಿರುವ ವನವಾಸಿಗಳ ಸಂಖ್ಯೆ ಕೆಲವು ಲಕ್ಷಗಳಷ್ಟಿದೆ.

ಅವರೂ ಕೂಡ ಎಲ್ಲರಂತೆ ಬದುಕಬೇಕಲ್ಲವೇ? ಅವರೆಡೆಗೆ ನಮ್ಮ ಸ್ನೇಹಹಸ್ತ ಚಾಚಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂದು ನಿಮಗೆ ಅನಿಸುತ್ತಿದೆಯೇ? ಹಾಗಿದ್ದಲ್ಲಿ ವನವಾಸಿ ಕಲ್ಯಾಣ ನಿಮ್ಮನ್ನು ಸ್ವಾಗತಿಸುತ್ತದೆ. ವನವಾಸಿ ಬಂಧುಗಳ ಸಮಗ್ರ ವಿಕಾಸಕ್ಕಾಗಿ ಕಳೆದ ಅನೇಕ ದಶಕಗಳಿಂದ ಶ್ರಮಿಸುತ್ತಿರುವ ವನವಾಸಿ ಕಲ್ಯಾಣ, ಸೇವಾಸಕ್ತ ಸಹೃದಯ ಬಂಧುಗಳಿಗೆ ತರಬೇತಿ ನೀಡಿ, ವನವಾಸಿ ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ನೀಡುತ್ತದೆ. ಪೂರ್ಣ ಸಮಯ ಕೊಡುವವರಿಗೆ ಅಗತ್ಯವಿದ್ದಲ್ಲಿ ಗೌರವ ಧನ ಕೊಡುವ ವ್ಯವಸ್ಥೆಯೂ ಇದೆ.

ತಾವು ಕೆಲವು ವರ್ಷ ಪೂರ್ಣ ಸಮಯ ಕೊಡಬಹುದು. ವಾರದಲ್ಲಿ ಒಂದೆರಡು ದಿನ ಸಮಯ ಕೊಡಬಹುದು ಅಥವಾ ತಿಂಗಳಿನಲ್ಲಿ ಕೆಲವು ದಿನ ಸಮಯ ಕೊಡಬಹುದು.

**ಉತ್ಸಾಹಿಗಳು ಸಂಪರ್ಕಿಸಿ: ಶ್ರೀಪಾದ,** ರಾಜ್ಯ ಸಂಘಟನಾ ಕಾರ್ಯದರ್ಶಿ – 94803 16629 **ಶ್ರೀನಿವಾಸ,** ರಾಜ್ಯ ಸಹ ಸಂಘಟನಾ ಕಾರ್ಯದರ್ಶಿ – 95910 96787 **ಶಾಂತಾರಾಮ ಸಿದ್ದಿ,** ರಾಜ್ಯ ಸಹ ಕಾರ್ಯದರ್ಶಿ – 94812 79470

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: **ಪುಂಗವ,** #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009   ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.